# ಪಾಠಾಂತರ...

ಶಾಲೆ ಕಾಲೇಜುಗಳ ಪಠ್ಯಗಳ ಮೂಲಕವೇ ಸಾಹಿತ್ಯದ ಮೋಹಕಲೋಕಕ್ಕೆ ಪ್ರವೇಶ ಪಡೆದವರುಂಟು. ಮಹತ್ವದ ಲೇಖಕರ ಬರಹಗಳನ್ನು ಅನೇಕರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಕೇಳಿ, ಓದಿ ಆ ಕುರಿತು ಆಸಕ್ತಿ ಬೆಳೆಸಿಕೊಂಡಿರುತ್ತಾರೆ. ಪಠ್ಯದ ಬರಹಗಳು ಭಾರೀ ಸಂಪತ್ತು ತುಂಬಿದ ತಿಜೋರಿಗೆ ಕೀಲಿಕೈ ಇದ್ದಂತೆ. ಆ ಕೀಲಿಯನ್ನು ಹಲವರು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ; ಬಹುತೇಕರು ಪರೀಕ್ಷೆಗಳು ಮುಗಿದ ಬಳಿಕ ಅವನ್ನು ಎಲ್ಲೋ ಎಸೆಯುತ್ತಾರೆ; ಇನ್ನುಳಿದವರಲ್ಲಿ ಗೊತ್ತಿದ್ದೂ ಗೊತ್ತಿದ್ದೂ ಕಳೆದೇ ಹೋಗುತ್ತದೆ!

ಈಗ ನಮ್ಮ ಹೈಸ್ಕೂಲು, ಕಾಲೇಜಿನ ಕನ್ನಡ ಭಾಷೆಯ ಪಠ್ಯಗಳಲ್ಲಿ ಮಹತ್ವದ ಲೇಖಕರ ಬರಹಗಳು ಹೆಚ್ಚು ಕಾಣುವುದಿಲ್ಲ. ವಿದ್ಯಾರ್ಥಿಗಳಿಗೆ ಇರುವ ಕೊಂಚ ಅಭಿರುಚಿ, ಆಸಕ್ತಿ ಪಠ್ಯಗಳಲ್ಲಿರುವ ಕೆಟ್ಟ ಬರಹಗಳನ್ನು ಓದಿ, ಪಾಠ ಕೇಳಿ ಕಮರಿ ಹೋಗುತ್ತದೆ. ಅವರು 'ಕನ್ನಡ ಸಾಹಿತ್ಯ ಇರುವುದೇ ಹೀಗೆ' ಎಂಬ ತೀರ್ಮಾನಕ್ಕೆ ಬಂದು ಸಾಹಿತ್ಯದ ಆಜನ್ಮ ವೈರಿಗಳಾಗಿ ಪರಿವರ್ತಿತರಾಗುತ್ತಾರೆ. ಇಂತಹ ಸಾಹಿತ್ಯ ವಿರೋಧಿ ಉಗ್ರಗಾಮಿಗಳು ಹುಟ್ಟಿಕೊಳ್ಳಲು ಅವರಿಗೆ ತಲೆಬೇನೆ ತಂದಿರುವ ಪಠ್ಯಗಳೇ ಸ್ಫೂರ್ತಿಯನ್ನು ಕೊಟ್ಟಿರುತ್ತವೆ. ಇದಕ್ಕೆಲ್ಲ ಕಾರಣ – ಈ ಪಠ್ಯಗಳನ್ನು ಪ್ರಾದೇಶಿಕತೆ, ಮೀಸಲಾತಿ, ಜಾತಿ ಮತ್ತಿತರ ಸಾಹಿತ್ಯವಲ್ಲದ ಮಾನದಂಡಗಳಿಗೆ ಒತ್ತುಕೊಟ್ಟು ಆಯ್ಕೆ ಮಾಡಿರುವ ಪಠ್ಯರಚನಾ ಸಮಿತಿಗಳು, ಸಾಹಿತ್ಯದ ಬೋಧನೆಯನ್ನು ಸಂತೆಯ ವ್ಯಾಪಾರದಂತೆ ಮಾಡುವ ಅಧ್ಯಾಪಕರು.

ಕೆಲವು ದಶಕಗಳ ಹಿಂದೆ ಉತ್ತಮ ಸಾಹಿತ್ಯವನ್ನು ಗುರುತಿಸುವ, ಯಾವುದನ್ನು ವಿದ್ಯಾರ್ಥಿಗಳು ಓದಬೇಕು ಎಂಬುದನ್ನು ನಿಖರವಾಗಿ ತೀರ್ಮಾನಿಸಬಲ್ಲ ತಜ್ಞರು ಪಠ್ಯಪುಸ್ತಕ ರಚನಾ ಸಮಿತಿಯಲ್ಲಿರುತ್ತಿದ್ದರು. ಈಗ ಅವರು ಇಲ್ಲ ಎಂದಲ್ಲ; ಅಂತಹವರ ಸಂಖ್ಯೆ ಕಡಿಮೆ ಆಗಿದೆಯಷ್ಟೆ. ತಲೆಮಾರುಗಳ ಆರೋಗ್ಯವನ್ನು ಕಾಪಾಡಬಲ್ಲ, ನಮ್ಮ ಬದುಕು, ಅನುಭವ, ಸಂವೇದನೆ, ಭಾಷೆಯ ಕುರಿತಂತೆ ಸೂಕ್ಷ್ಮತೆಯನ್ನು ಬೆಳೆಸುವ ಪಠ್ಯಗಳನ್ನು ಆಯ್ಕೆ ಮಾಡುವ ಕೆಲಸ ಅತ್ಯಂತ ಜವಾಬ್ದಾರಿಯದು, ಸವಾಲಿನದು. ಅದು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ ಸಂಗತಿಯಲ್ಲ; ಅದು ಸಾಂಸ್ಕೃತಿಕ, ರಾಜಕೀಯವಾದುದು ಸಹ. ಹಾಗಾಗಿಯೇ ಈಗಿನ ಸಾಹಿತ್ಯದ ಪದವೀಧರರು ಯಾವ ಪ್ರಮುಖ ಲೇಖಕನನ್ನೂ ಪೂರ್ತಿಯಾಗಿ ಓದದೆಯೇ ಪದವಿಯನ್ನು ಪಡೆದಿರುತ್ತಾರೆ. ಅಂತಹವರೇ ನಾಳೆ ಪಠ್ಯಗಳನ್ನು ಆಯ್ಕೆ ಮಾಡುವವರೂ ಭಾಷೆ, ಸಾಹಿತ್ಯದ ಕುರಿತು ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳುವವರೂ ಆಗಿರಬಹುದು.

ಕನ್ನಡ ಭಾಷೆಯ ಬಗ್ಗೆ ಆಸಕ್ತಿ ಹುಟ್ಟಿಸುವ ಸರಿಯಾದ ಪಠ್ಯಗಳೇ ಇಲ್ಲದೆ ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಬೇಕು ಎನ್ನುವುದಕ್ಕೆ ಅರ್ಥವಿಲ್ಲ. ಅವನ್ನು ಉಳಿಸಲು ಸರ್ಕಾರಗಳು ಸುರಿಯುವ ಅಪಾರ ಪ್ರಮಾಣದ ಹಣದಿಂದ ಏನಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತು. ಅವಕಾಶವಾದಿ ರಾಜಕಾರಣ ಮಾಡುವ ಸಾಹಿತಿಗಳು, ಸರಿಯಾದ ಯೋಜನೆ, ಯೋಚನೆ ಇಲ್ಲದ ರಾಜಕಾರಣಿಗಳು ಇರುವ ತನಕ ಆಗುವುದು ಇದೇ. ಇಂಗ್ಲಿಷ್ ಶಿಕ್ಷಣದಿಂದ ಮಾತ್ರವಲ್ಲ ಕೆಟ್ಟ ಪಠ್ಯಗಳಿಂದಲೂ ಭಾಷೆಗೆ ಬೀಳುವ ಹೊಡೆತ ಕಡಿಮೆ ಏನಲ್ಲ. ಸಾಹಿತ್ಯ, ಭಾಷೆಯ ಕುರಿತು ಬೇರುಮಟ್ಟದಲ್ಲೇ ಆಸಕ್ತಿ, ಪ್ರೀತಿ ಹುಟ್ಟಿಸದಿದ್ದರೆ ಎಂತಹ ಫಲಭರಿತ ಹಸಿರು ಮರವೂ ಇಂತಹ ಗೆದ್ದಲುಗಳಿಂದ ಒಣಗಲು ಬಹಳ ಕಾಲ ಬೇಕಾಗುವುದಿಲ್ಲ.

**ಸಂದೀಪ ನಾಯಕ**

